Is it the pleasure of the House to grant leave of absence for Mr. S.W.J. Marley till the end of the current sittings of the Legislative Assembly.

Hon'ble Members—Yes.

MR. SPEAKER – Permission to remain absent is granted.

CALLING ATTENTION TO A MATTERS OF URGENT PUBLIC IMPORTANCE

ಅಧ್ಯಕ್ಷರು – ಮಾನ್ಯ ಪ್ರಭಾಕರ್ ತೇಲ್ಕರ್‌ರವರ ಗಮನ ಸೆಳೆಯುವ ಸೂಚನೆಯನ್ನು ಬೇರೆ ಒಂದು ದಿವಸ ತೆಗೆದುಕೊಳ್ಳಲಾಗುವುದು.

ಶ್ರೀ ಮಲ್ಲಿಕಾರ್ಜುನ ಖರ್ಗೆ ಮಾನ್ಯ ಪ್ರಭಾಕರ್ ತೆಲ್ಕರ್ ಮತ್ತು ನಾನು ಕೂಡಿ ಕಳುಹಿಸಿರುವುದರಿಂದ ಅವರು ಗೈರು ಹಾಜರಾಗಿದ್ದರೆ ನಾನು ಪ್ರಸ್ತಾಪಿಸುತ್ತೇನೆ.

ಅಧ್ಯಕ್ಷರು – ಈಗ ಮಾನ್ಯ ಮಂತ್ರಿಗಳು ಇಲ್ಲದಿರುವುದರಿಂದ ಇನ್ನೊಂದು ದಿವಸ ತೆಗೆದುಕೊಳ್ಳುತ್ತೇನೆ.

re : Providing free education facilities to students whose family income is below Rs. 3600 P A.

ಶ್ರೀ ಪಿ ರಾಮಯ್ಯ ವ್ (ಮಲ್ಲೇಶ್ವರಂ)—ವಾರ್ಷಿಕ ವರಮಾನ ೧೮,೦೦೦ ರೂಪಾಯಿಗಳಿಗಿಂತ ಕಡಿಮೆ ಇರುವ ಹಿಂದುಳಿದ ಕುಟುಂಬಗಳ ವಿದ್ಯಾರ್ಥಿಗಳಿಗೆ ನೀಡಿದ್ದ ಸೌಲಭ್ಯವನ್ನು ಮುಂದಿನ ಶಿಕ್ಷಣ ವರ್ಷದಿಂದ ಹಿಂತೆಗೆದುಕೊಂಡು ಅದರ ಸ್ಥಾನದಲ್ಲಿ ಯಾವ ಕೋಮಿನ ಬೇಧವೂ ಇಲ್ಲದೆ ೩,೬೦೦ ರೂಪಾಯಿಗಳಿಗಿಂತ ಕಡಿಮೆ ವರಮಾನವುಳ್ಳ ಎಲ್ಲ ಕುಟುಂಬಗಳ ವಿದ್ಯಾರ್ಥಿಗಳಿಗೂ ಉಚಿತ ಶಿಕ್ಷಣ ಸೌಲಭ್ಯ ನೀಡುವ ಆಜ್ಞೆಯಿಂದ ಉಂಟಾದ ಕಳವಳದ ಬಗ್ಗೆ ಸರ್ಕಾರದ ಗಮನವನ್ನು ಸೆಳೆಯುತ್ತೇನೆ.

ಶ್ರೀ ಎಲ್.ಜಿ. ಹಾವನೂರ್ (ಕಾನೂನು ಹಾಗೂ ಸಮಾಜ ಕಲ್ಯಾಣ ಶಾಖೆಗಳ ಮಂತ್ರಿಗಳು)—ಆ ಬಗ್ಗೆ ನನ್ನ ಹೇಳಿಕೆ ಈ ರೀತಿ ಇದೆ :—

೨೭-೩-೧೯೭೯ನೇ ದಿನಾಂಕದ ಎಸ್ ಡಬ್ಲ್ಯೂ.ಎಲ್. ೨೭೩ ಬಿಸಿಎ ೭೮ನೇ ಆಜ್ಞೆಯೊಂದನ್ನು ಹೊರಡಿಸಿ, ಸರಕಾರದವರು ಯಾವ ಕೋಮಿನ ಭೇದವೂ ಇಲ್ಲದೆ ೩೬೦೦-೦೦ ರೂಪಾಯಿಗಳಿಗಿಂತ ಕಡಿಮೆ ವಾರ್ಷಿಕ ವರಮಾನ ಇರುವ ಎಲ್ಲ ಕುಟುಂಬಗಳ ವಿದ್ಯಾರ್ಥಿಗಳಿಗೂ ವ್ಯಾಸಂಗ ಮತ್ತು ಪ್ರಯೋಗಾಲಯ ಶುಲ್ಕಗಳನ್ನು ಮನ್ನಾ ಮಾಡಿದ್ದಾರೆ.

೨. ಈ ಆಜ್ಞೆಯ ಅನುಸಾರ ೧೯೭೯-೮೦ನೇ ಶಿಕ್ಷಣ ವರ್ಷದಿಂದ, ವಾರ್ಷಿಕ ವರಮಾನ ೩,೬೦೦-೦೦ ರೂಪಾಯಿಗಳಿಗೂ ಕಡಿಮೆ ಇರುವ ಕುಟುಂಬದ ವಿದ್ಯಾರ್ಥಿಗಳು, ಇದುವರೆವಿಗೂ ಕೊಡಬೇಕಾಗಿದ್ದ ವ್ಯಾಸಂಗ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕ ಇವೆರಡನ್ನೂ, ಇನ್ನು ಮುಂದೆ ಕೊಡಬೇಕಾಗಿಲ್ಲ. ಈ ಸೌಲಭ್ಯ ಯಾವ ಕೋಮಿನ ಬೇಧವೂ ಇಲ್ಲದೆ ರಾಜ್ಯದ ಎಲ್ಲ ವಿದ್ಯಾರ್ಥಿಗಳಿಗೂ ಲಭ್ಯವಾಗುತ್ತದೆ.

೩. ೩,೬೦೦-೦೦ ರೂಪಾಯಿಗಳ ವಾರ್ಷಿಕ ಆದಾಯದ ಮಿತಿಕೆ ಮೇಲ್ ಶುಲ್ಕ ರಿಯಾಯಿತಿಗಳಿಗೆ ಮಾತ್ರ ಅನ್ವಯವಾಗುವುದು. ವೃತ್ತಿ ಶಿಕ್ಷಣ ಮತ್ತು ತಾಂತ್ರಿಕ ಶಾಲಾ ಕಾಲೇಜುಗಳ ಪ್ರವೇಶದಲ್ಲಿ ವಿಶೇಷವಾಗಿಡಲಾದ ಸ್ಥಾನಗಳಿಗೆ ಭರ್ತಿ ಮತ್ತು ಪರಭಾರಿ ಸೇವೆಗಳಲ್ಲಿನ ವಿಶೇಷ ಸ್ಥಾನಗಳ ಭರ್ತಿ, ಈ ಬಗ್ಗೆ ಹೊರಡಿಸಿರುವ ಆಜ್ಞೆಗಳು ಇನ್ನು ಮುಂದೆಯೂ ಮುಂದುವರೆಯುವುವು.

೪. ಈ ಆಜ್ಞೆಯ ಅನುಸಾರ ಲಭ್ಯವಾಗುವ ಸೌಲಭ್ಯಗಳನ್ನು ವಿತರಣೆ ಮಾಡುವಲ್ಲಿ ಅನುಸರಿಸಬೇಕಾದ ವಿಧಿ, ವಿಧಾನಗಳ ಬಗ್ಗೆ ಪ್ರತ್ಯೇಕವಾದ ನಿಯಮಾವಳಿಗಳನ್ನು ಸಹ ರೂಪಿಸಲಾಗಿರುತ್ತದೆ.

೫. ಈ ಆಜ್ಞೆ ಜಾರಿಗೆ ಬರುವ ಪೂರ್ವ ಹಿಂದುಳಿದ ವರ್ಗಗಳ ಮತ್ತು ಆರ್ಥಿಕವಾಗಿ ಹಿಂದುಳಿದು "ಸ್ಪೆಷಲ್ ಗ್ರೂವ್" ಎಂದು ಪರಿಗಣಿಸಲ್ಪಡುತ್ತಿದ್ದ ವಿದ್ಯಾರ್ಥಿಗಳಿಗೆ, ಈ ಕೆಳಕಂಡ ಶುಲ್ಕಗಳ ವಿನಾಯಿತಿ ದೊರೆಯುತ್ತಿತ್ತು.

೧. ಪ್ರವೇಶ ಶುಲ್ಕ	೨. ವ್ಯಾಸಂಗ ಶುಲ್ಕ
೩. ಪ್ರಯೋಗಾಲಯ ಶುಲ್ಕ	೪. ಸ್ಪೋರ್ಟ್ಸ್ ಶುಲ್ಕ
೫. ಪುಸ್ತಕ ಭಂಡಾರ ಶುಲ್ಕ	೬. ವಾಚನ ಲಯ ಶುಲ್ಕ
೭. ಪರೀಕ್ಷಾ ಶುಲ್ಕ	೮. ಸರಕಾರದಿಂದ ಪುರಸ್ಕೃತ ವಾದ ಇತರ ಯಾವುದೇ ಶುಲ್ಕ.

೬. ೮-೮-೧೯೭೭ನೇ ದಿನಾಂಕದ ಇಡಿ ೬೧ ಸಿಎಸ್‌ಎಸ್ ೭೭ ಮತ್ತು ೨೫-೧-೧೯೭೮ನೇ ದಿನಾಂಕದ ಇಡಿ ೧೪೪ ಸಿಎಸ್‌ಎಸ್ ೭೭. ಈ ಆಜ್ಞೆಗಳನುಸಾರ ಶುಲ್ಕ ವಿನಾಯಿತಿ ವಾರ್ಷಿಕ ಆದಾಯ ಹತ್ತು ಸಾವಿರ ರೂಪಾಯಿಗೆ ಮೀರಿದ ಕುಟುಂಬದ ವಿದ್ಯಾರ್ಥಿಗಳಿಗೆ ಮಾತ್ರ ಲಭ್ಯವಾಗುತ್ತಿತ್ತು.

೭. ಇಲ್ಲಿಯವರೆವಿಗೂ ಲಭ್ಯವಿರುವ ಅಂಕಿಸಂಖ್ಯೆಗಳ ಅಂದಾಜಿನಂತೆ ರಾಜ್ಯದಲ್ಲಿ ಸುಮಾರು ಮೂರೂವರೆ ಲಕ್ಷಕ್ಕೂ ಮೀರಿದಷ್ಟು ಪದವಿ ಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳಿದ್ದಾರೆಂದು, ಅಂದಾಜು ಮಾಡಬಹುದು. ಇದರಂತೆ ರಾಜ್ಯ ಸರ್ಕಾರ ಪ್ರತಿವರ್ಷ ವಿವಿಧ ವಿದ್ಯಾ ಸಂಸ್ಥೆಗಳಿಗೆ ತುಂಬಿಕೊಡಬೇಕಾದ ಹಣದ ಜವಾಬ್ದಾರಿ ದೊಡ್ಡ ಪ್ರಮಾಣದ್ದಾಗಿರುತ್ತದೆ.

೮. ಈ ಹೊಸ ನೀತಿಯನ್ನು ರೂಪಿಸುವಲ್ಲಿ, ಸರಕಾರ ಈ ಕೆಳಕಂಡ ಮುಖ್ಯ ವಿಷಯಗಳನ್ನು ಗಮನಕ್ಕೆ ತೆಗೆದುಕೊಂಡಿದೆ.

(ಅ) ಇದುವರೆವಿಗೂ ಜಾರಿಯಲ್ಲಿದ್ದ ಆಜ್ಞೆಗಳನುಸಾರ ಶುಲ್ಕದ ವಿನಾಯಿತಿ ಸೌಲಭ್ಯವನ್ನು ಪಡೆಯುತ್ತಿದ್ದ, ವಿವಿಧ ವರ್ತಮಾನ ಹಂತದ ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಿದಾಗ, ಈ ಅನುಕೂಲದ ಬಹುಭಾಗ ವಾರ್ಷಿಕ ಆದಾಯ ೩ ಸಾವಿರ ರೂಪಾಯಿಗಳಿಷ್ಟಿದ್ದ ಗುಂಪಿಗೇ ಹೋಗುತ್ತಿದ್ದುದು ಮನವರಿಕೆಯಾಗುತ್ತದೆ. ೮. ೧೦ ಸಾವಿರದ ತಪ್ಪ ಹೆಚ್ಚಿನ ವಾರ್ಷಿಕ ವರಮಾನವ ಗುಂಪಿಗೆ ವಿದ್ಯಾರ್ಥಿಗಳಿಗೆ ಲಭ್ಯವಾಗುತ್ತಿದ್ದ ಅನುಕೂಲ ತೀರ ಕಡಿಮೆ. ಆದ್ದರಿಂದ, ಈ ಹೊಸ ಯೋಜನೆಯಿಂದ ಆಗುವ ವಾಸ್ತವಿಕ ಪರಿಣಾಮ ಕೇವಲ ಅಲ್ಪ. ಕಡಿಮೆ ವರಮಾನದ ಹಿಂದುಳಿದ ವಿದ್ಯಾರ್ಥಿಗಳ ಮೇಲೆ ಆಗಬಹುದಾದ ವ್ಯತಿರಿಕ್ತ ಪರಿಣಾಮವು ತೀರ ಕಡಿಮೆಯೆಂದು ತಿಳಿಯಬಹುದು.

(ಆ) ಕೋಮುವಾರು ಆಧಾರವನ್ನು ಬದಲಾಯಿಸಿ ವಾರ್ಷಿಕ ಆದಾಯದ ಆಧಾರದ ಮೇಲೆ ಈ ಅನುಕೂಲ ದೊರೆಯುವಂತೆ ಮಾಡಿರುವುದುಂದ ಈ ಯೋಜನೆಗೆ ವಿಶಾಲ ತಳಹದಿ ದೊರೆತು ರಾಜ್ಯದ ಎಲ್ಲಾ ವಿದ್ಯಾರ್ಥಿಗಳಿಗೂ ಅನುಕೂಲವಾಗುವುದು.

(ಇ) ವಾರ್ಷಿಕ ವರಮಾನದ ಮಿತಿಯನ್ನು ೧೦ ೦೦೦ ರೂಪಾಯಿಗಳಿಂದ ೩೬೦೦-೦೦ ರೂಪಾಯಿಗಳಿಗೆ ಕಡಿಮೆ ಮಾಡಿದ್ದರಿಂದಲೂ ವ್ಯಾಸಂಗ ಶುಲ್ಕ ವಿನಾಯಿತಿಯನ್ನು ಕೇವಲ "ವ್ಯಾಸಂಗ ಶುಲ್ಕ ಮತ್ತು ಪ್ರಯೋಗಾಲಯ ಶುಲ್ಕ" ಇವೆರಡಕ್ಕೆ ಸೀಮಿತಗೊಳಿಸಿದ್ದರಿಂದಾಗಿ ರಾಜ್ಯದ ಆರ್ಥಿಕ ಹೊಣೆಯು ಈ ಕಾರ್ಯಕ್ರಮಕ್ಕೆ ಅನ್ವಯಿಸಿದಂತೆ ನಿಯಂತ್ರಿತಗೊಳ್ಳುವ ನಿರೀಕ್ಷೆ ಇದೆ.

(ಈ) ಇದರ ಜೊತೆಗೆ ಶಾಲಾ ಕಲೇಜುಗಳ ಆರಂಭದಲ್ಲಿ ವಿದ್ಯಾರ್ಥಿಗಳು ವಾರ್ಷಿಕ ವರಮಾನದ ಸರ್ಟಿಫಿಕೆಟ್‌ಗಳನ್ನು ಸಂಬಂಧಪಟ್ಟ ತಹಸೀಲ್ದಾರರಿಂದ ಪಡೆಯುವಲ್ಲಿ ಅನುಭವಿಸುವ ತೊಂದರೆ ತೊಡಕುಗಳ ಬಗ್ಗೆ ಸರಕಾರಕ್ಕೆ ಸಾಕಷ್ಟು ದೂರುಗಳೂ ಬಂದಿವೆ. ಅಲ್ಲದೆ ನಾನಾ ರೀತಿಯಿಂದ ಪಡೆದ ಸರ್ಟಿಫಿಕೇಟಿನ ಪ್ರಮಾಣೀಕರಣದ ಬಗ್ಗೆಯೂ ಅನೇಕ ದೂರುಗಳೂ ಬಂದಿವೆ, ವರ್ಷದ ಮೊದಲಿನಲ್ಲಿ ಬರುವ ವಿಪರೀತ ಒತ್ತಡವಿದಾಗಿ. ವರಮಾನದ ವಿವರಗಳನ್ನು ಕೂಲಂಕುಶವಾಗಿ ತನಿಖೆ ನಡೆಸಿ, ಕರಾರುವಾಕ್ಕಾದ ಸರ್ಟಿಫಿಕೇಟ್‌ಗಳನ್ನು ಕೊಡಲು ಸಾಕಷ್ಟು ಸಮಯದ ಅಭಾವವಿ ಎಂಬುದರಿಂದ, ಸರ್ಟಿಫಿಕೆಟ್‌ಗಳ ಬಗ್ಗೆ ಇನ್ನೂ ಹೆಚ್ಚಿನ ಜವಾಬ್ದಾರಿಯನ್ನು ಹೊರಲು ಸಾಧ್ಯವಾಗಲಾರದೆಂದು ಅಧಿಕಾರಿಗಳು ವಿವರಣೆ ಕೊಟ್ಟರೆ, ಸರ್ಟಿಫಿಕೆಟ್‌ಗಳನ್ನು ಪಡೆದುಕೊಳ್ಳುವಲ್ಲಿ ವಿದ್ಯಾರ್ಥಿಗಳಿಗೆ ಅನಾವಶ್ಯಕ ವಿಳಂಬ ಮತ್ತು ತೊಂದರೆ ಆಗುತ್ತದೆಂದು ವಿದ್ಯಾರ್ಥಿಗಳು ಮತ್ತು ಅವರ ಪಾಲಕರೂ

ದೊರೆಯುತ್ತಾರೆ. ಹೀಗಾಗಿ, ವಾರ್ಷಿಕ ಪರಮಾನದ ಸರ್ಟಿಫಿಕೇಟ್‌ಗಳ ತೃಪ್ತಿಕರ ತನಿಖೆ ಮತ್ತು ವಿಶ್ವಾಸ ಮಟ್ಟಿಗೆ ಸತ್ಯ ಎಂಬ ಬಗ್ಗೆ ನಿರ್ದಿಷ್ಟ ಅಭಿಪ್ರಾಯಕ್ಕೆ ಬರುವುದು ಸಮಸ್ಯೆಯಾಗಿ, ಈ ವಿಧಾನವನ್ನು ಸರಳಗೊಳಿಸುವುದು ಹೇಗೆಂಬ ವಿಚಾರ ಸರಕಾರದ ಗಮನದಲ್ಲಿದೆ.

೯. ಈ ಹೊಸ ತೀರ್ಮಾನದಿಂದ, ಸರಕಾರಕ್ಕೆ ಖಚಿತವಾಗಿ ಆಗುವ ಉಳಿತಾಯದ ಬಗ್ಗೆ ಯಾವ ನಿರ್ದಿಷ್ಟವಾದ ಅಂಕಿ ಸಂಖ್ಯೆಗಳೂ ಮತ್ತು ವಿವರಗಳೂ ಲಭ್ಯವಾಗಿಲ್ಲ. ಈ ಯೋಜನೆಯನ್ನು ಇಮವರೆಗೂ ನಿರ್ವಹಿಸುತ್ತಿದ್ದ ವಿದ್ಯಾಇಲಾಖೆ ಮತ್ತು ಈಗ ತಾನೇ ಈ ಕಾರ್ಯವನ್ನು ವಹಿಸಿಕೊಂಡಿರುವ ಹಿಂದುಳಿದ ವರ್ಗಗಳ ಮತ್ತು ಅಲ್ಪಸಂಖ್ಯಾತರ ನಿರ್ದೇಶನಾಲಯ ಸಂಬಂಧಪಟ್ಟ ವಿವಿಧ ವಿದ್ಯಾಸಂಸ್ಥೆಗಳಿಂದ ಅವಶ್ಯಕವಾದ ಎಲ್ಲ ವಿವರಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಿವೆ.

೧೦. ಹೊಸ ಆಜ್ಞೆಯ ಸಂಪೂರ್ಣ ಪರಿಣಾಮದ ವಿವರಗಳು ಇನ್ನೂ ದೊರೆಯುವ ಮೊದಲೇ ಈ ಆಜ್ಞೆಯ ಬಗ್ಗೆ ಅಭಿಪ್ರಾಯಗಳನ್ನು ರೂಪಿಸಿಕೊಳ್ಳುವುದು ಅಸಹಜವಾಗಬಹುದು.

೧೧. ಈ ಆಜ್ಞೆಯಿಂದ ಅನಾಸಂಕಲವಾದ ಬಗ್ಗೆ ಸರಕಾರಕ್ಕೆ ಯಾವ ಮೂಲಗಳಿಂದಲೂ ಈವರೆಗೆ ದೂರುಗಳು ಬಂದಿಲ್ಲ. ತದ್ವಿರುದ್ಧವಾಗಿ ಸರಕಾರದ ಈ ಯೋಜನೆಯನ್ನು ಸಾರ್ವಜನಿಕರೂ, ಪತ್ರಿಕೆಗಳೂ, ಹಾರ್ದಿಕವಾಗಿ ಸ್ವಾಗತಿಸಿ ಪ್ರಶಂಶಿಸಿವೆ. ಕಾರ್ಯಗತಗೊಳಿಸುವಲ್ಲಿ ಏನಾದರೂ ಅಡಚಣೆ ಗಳಿದ್ದಲ್ಲಿ ಸರಕಾರದ ಗಮನಕ್ಕೆ ತಂದರೆ, ಅಂತಹವುಗಳನ್ನು ನಿವಾರಿಸಲು ಸರಕಾರ ಸದಾಸಿದ್ಧ

ಶ್ರೀ ಎಸ್ ಆರ್. ಬೊಮ್ಮಾಯಿ—ಮಾನ್ಯ ಅಧ್ಯಕ್ಷರೇ, ಇತ್ತೀನ ದಿವಸ ಮಾನ್ಯ ಮಂತ್ರಿಯವರು ಕನ್ನಡದಲ್ಲೇ ತಮ್ಮ ಹೇಳಿಕೆಯನ್ನು ಕೊಟ್ಟಿದ್ದಕ್ಕಾಗಿ ನಾನು ಅವರಿಗೆ ಮೊಟ್ಟಮೊದಲನೆಯದಾಗಿ ಅಭಿನಂದನೆಗಳನ್ನು ಸಲ್ಲಿಸುತ್ತೇನೆ.

ಶ್ರೀ ಪಿ. ರಾಮಪ್ಪ ವ—ಸ್ವಾಮಿ. ಮಾನ್ಯ ಮಂತ್ರಿಯವರು ಕೊಟ್ಟಿರತಕ್ಕಂಥ ಹೇಳಿಕೆಯನ್ನು ನೋಡಿದರೆ ಒಂದೊಂದು ವರ್ಷದಲ್ಲಿ ಎರಡು ವಿಧವಾದ ಸರಕಾರಿ ಆಜ್ಞೆಗಳನ್ನು ಹೊರಡಿಸಿದ್ದಾರೆ ಈ ಬಗ್ಗೆ ನಾನು ವಿವರಗಳನ್ನು ಕೇಳುತ್ತಿದ್ದೇನೆ. ಮೊದಲನೆಯದಾಗಿ ಪುಟ ೧೯ರಲ್ಲಿ ''೮ ಲಕ್ಷ ೨೬ನೇ ದಿನಾಂಕದ ಇಡಿ ೬೧, ಸಿಎಸ್‌ಎಸ್ ೭೭ ಮತ್ತು ೨೫-೧ ೧೯೭೮ನೆ ದಿನಾಂಕದ ಇಡಿ ೧೪೪ ಸಿಎಸ್‌ಎಸ್ ೭೭, ಈ ಆಜ್ಞೆಗಳನುಸಾರ ಶುದ್ಧ ವಿನಾಯಿತಿ ವಾರ್ಷಿಕ ಆದಾಯ ಹತ್ತು ಸಾವಿರ ರೂಪಾಯಿಗೆ ಏರಿದ ಕುಟುಂಬದ ವಿದ್ಯಾರ್ಥಿಗಳಿಗೆ ಮಾತ್ರ ಲಭ್ಯವಾಗುತ್ತಿತ್ತು'' ಎಂದು ಹೇಳಿ ಒಂದು ಆಜ್ಞೆಯನ್ನು ಹೊರಡಿಸಿದ್ದಾರೆ ಈ ಆಜ್ಞೆಯನ್ನು ಹೊರಡಿಸುವುದಕ್ಕೆ ಕಾರಣವೇನು? ಇದರ ಉದ್ದೇಶವೇನು ? ನನಗೆ ತಿಳಿದ ಮಟ್ಟಿಗೆ ಅದು ಚುನಾವಣೆಯ ವರ್ಷವಾಗಿತ್ತು ತಾವು ಅಧಿಕಾರಕ್ಕೆ ಬರಬೇಕು ಎಂದು ಹೇಳಿ ಅನೆಕ ಕನ್ಸೆಷನ್ ಕೊಟ್ಟಹೋದಿರಿ. ಚುನಾವಣೆ ಮುಗಿದು ತಾವು ಅಧಿಕಾರಕ್ಕೆ ಬಂದ ಮೇಲೆ ಪುನಃ ಅವನ್ನು ಚೇಂಜ್ ಮಾಡಿದಿರಿ ಅಂದರೆ ಇದನ್ನು ಕಡಿಮೆ ಮಾಡಿದ್ದೀರಿ. ಇದರ ಬಗ್ಗೆ ತಾವು ವಿವರ ಕೊಡಬೇಕು. ಇನ್ನು ಎರಡನೆಯದಾಗಿ ಪುಟ ೨೦ರ ೭ನೇ ಪ್ಯಾರಾದಲ್ಲಿ ' ಈ ಆಲಾಪನೆಗೆ ಇದುವರೆವಿಗೂ ಲಭ್ಯವಾಗಿರುವ ಅಂಕಿ-ಸಂಖ್ಯೆಗಳ ಅಂದಾಜಿನಂತೆ ರಾಜ್ಯದಲ್ಲಿ ಸುಮಾರು ಮೂರೂವರೆ ಲಕ್ಷಕ್ಕೂ ಮೀರಿದಷ್ಟು ಪದವಿ ಪೂರ್ವ ಮತ್ತು ಸ್ನಾತಕೋತ್ತರ ವಿದ್ಯಾರ್ಥಿಗಳು ಇದ್ದಾರೆಂದು, ಅಂದಾಜು ಮಾಡಬಹುದು ಇದರಿಂದ ರಾಜ್ಯ ಸರಕಾರ ಪ್ರತಿವರ್ಷ ವಿವಿಧ ವಿದ್ಯಾಸಂಸ್ಥೆಗಳಿಗೆ ತುಂಬಿಕೊಡಬೇಕಾದ ಹಣದ ಜವಾಬ್ದಾರಿ ದೊಡ್ಡ ಪ್ರಮಾಣದ್ದಾಗಿರುತ್ತದೆ' ಎಂದು ತಾವು ಹೇಳಿದ್ದಿರಿ. ಈ ವಿಚಾರದಲ್ಲಿ ತಾವು ಎಷ್ಟು ಹಣ ಕೊಡಬೇಕಾಗಿದೆ ಎಂಬ ಬಗ್ಗೆ ವಿವರ ಕೇಳಿದೆವು ಮೂರನೆಯದಾಗಿ ಲೆನೇ ಪ್ಯಾರಾದಲ್ಲಿ ''ಇದುವರೆವಿಗೂ ಜಾರಿಯಲ್ಲಿದ್ದ ಆಜ್ಞೆಗಳನ್ವಯ ಫೀಸ್ ವಿನಾಯಿತಿ ಸೌಲಭ್ಯವನ್ನು ಪಡೆಯುತ್ತಿದ್ದ, ವಿವಿಧ ವರಮಾನ ಹಂತದ ವಿದ್ಯಾರ್ಥಿಗಳ ಸಂಖ್ಯೆಯನ್ನು ಪರಿಗಣಿಸಿದಾಗ, ಈ ಅನುಕೂಲದ ಬಹುಭಾಗ ವಾರ್ಷಿಕ ಆದಾಯ ಸಾವಿರ ರೂಪಾಯಿಗಳಿಗೂ ಹೆಚ್ಚಾಗಿದ್ದು ಮಾನವರಿಯೊಗಾಗುತ್ತದೆ. ೮-೧೦ ಸಾವಿರದಂತಹ ಹೆಚ್ಚಿನ ವಾರ್ಷಿಕ ಪರಮಾನದ ಗುಂಪಿನ ವಿದ್ಯಾರ್ಥಿಗಳಿಗೆ ಲಭ್ಯವಾಗುತ್ತಿದ್ದ ಅನುಕೂಲ ತೀರ ಕಡಿಮೆ. ಆದ್ದರಿಂದ, ಈ ಹೊಸ ಯೋಜನೆಯಿಂದ ಆಗುವ ವಾಸ್ತವಿಕ ಪರಿಣಾಮ ಕೇವಲ ಅಲ್ಪ. ಕಡಿಮೆ ವರಮಾನದ ಹಿಂದುಳಿದ ವಿದ್ಯಾರ್ಥಿಗಳ ಮೇಲೆ ಆಗಬಹುದಾದ ವ್ಯತಿರಿಕ್ತ ಪರಿಣಾಮವು ತೀರ ಕಡಿಮೆಯೆಂದು ತಿಳಿಯಬಹುದು'' ಎಂದು ಹೇಳಿದೀರಿ. ಹೀಗಿದ್ದರೆ ಇದನ್ನೇ ಏತಕ್ಕೆ ರಿಟೈನ್ ಮಾಡಬಾರದಿಗಿತ್ತು ? ಇದರಿಂದ ಮಧ್ಯಮವರ್ಗದ ಜನರಿಗೆ ಅನುಕೂಲವಾಗುತ್ತಿತ್ತಲ್ಲವೆ? ಆದ್ದರಿಂದ ಇದನ್ನು ವಾಪಸ್ ಏತಕ್ಕೆ ತೆಗೆದುಕೊಂಡಿರಿ ಎಂಬ ಬಗ್ಗೆ ವಿವರಣೆ ಕೊಡಬೇಕು.

ಇನ್ನು ಳನೆಯದಾಗಿ ೨ನೇ ಪುಟದ ೮ನೇ ಪ್ಯಾರಾದ (ಈ)ಯಲ್ಲಿ ''ವಾರ್ಷಿಕ ವರಮಾನದ ಸರ್ಟಿಫೀಕೇಟ್‌ಗಳ ತೃಪ್ತಿಕರ ತನಿಖೆ ಮತ್ತು ಎಷ್ಟರ ಮಟ್ಟಿಗೆ ಸತ್ಯ ಎಂಬ ಬಗ್ಗೆ ನಿರ್ದಿಷ್ಟ ಅಭಿಪ್ರಾಯಕ್ಕೆ ಬರುವುದು ಸಮಸ್ಯೆಯಾಗಿ, ಈ ವಿಧಾನವನ್ನು ಸರಳಗೊಳಿಸುವುದು ಹೇಗೆಂಬ ವಿಚಾರ ಸರಕಾರದ ಗಮನದಲ್ಲಿದೆ'' ಎಂದು ಹೇಳಿದ್ದೀರಿ. ಹೀಗೆ ಹೇಳಿರುವುದರಿಂದ ತಪ್ಪಿಗೆ ಗೊತ್ತಿರುವ ಹಾಗೆ ಮೇ ತಿಂಗಳ ಕೊನೆಯ ಭಾಗಕ್ಕೆ ಶಾಲಾ ಕಾಲೇಜುಗಳು ಪ್ರಾರಂಭವಾಗುತ್ತವೆ : ಈ ಸರ್ಕಾರಿ ಆಜ್ಞೆಯಿಂದ ಸುಮಾರು ೪ ಲಕ್ಷ ವಿದ್ಯಾರ್ಥಿಗಳ ಮೇಲೆ ಬಹಳ ಪರಿಣಾಮ ಬೀರುತ್ತದೆ. ಆದ್ದರಿಂದ ಈ ಸಮಸ್ಯೆಯನ್ನು ಬಗೆಹರಿಸಲು ತಾವು ಏನು ಕಾರ್ಯಕ್ರಮವನ್ನು ಹಾಕಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು, ಈ ವಿಚಾರದಲ್ಲಿ ಎಂ.ಎಲ್.ಎ., ಎಂ.ಎಲ್.ಸಿ.ಗಳಿಗೆ ವರಮಾನದ ಸರ್ಟಿಫಿಕೇಟ್ ಕೊಡತಕ್ಕಂಥ ಅಧಿಕಾರ ನೀಡುತ್ತೀರಾ ? ಕೊನೆಯದಾಗಿ ತಾವು ೩೬೦೦ ರೂಪಾಯಿಗಳ ವರಮಾನವನ್ನು ಏನು ಫಿಕ್ಸ್ ಮಾಡಿದ್ದೀರಿ ಇದರಲ್ಲಿ ಕ್ಲಾಸ್ (೪) ಎಂಪ್ಲಾಯೀಸ್‌ಗಳ ಮಕ್ಕಳು, ಕಾರ್ಖಾನೆಯಲ್ಲಿ ಕೆಲಸ ಮಾಡತಕ್ಕಂಥವರ ಮಕ್ಕಳು ಬರುತ್ತಾರೆ. ತಾವು ಏನು ಫಿಕ್ಸ್ ಮಾಡಿದ್ದೀರಿ ಇದು ಕಡಿಮೆ ಇದೆ. ಇದನ್ನು ೫೦೦೦ ರೂಪಾಯಿ ಗಳಿಗೆ ಏರಿಸತಕ್ಕಂಥಾದ್ದು ಸರ್ಕಾರದವರ ಮನಸ್ಸಿನಲ್ಲಿ ಇದೆಯೇ ಎಂಬುದನ್ನು ತಿಳಿಸಬೇಕು.

ಶ್ರೀ ಎಲ್.ಜಿ. ಹಾವನೂರ್—ಸ್ವಾಮಿ, ೮-೮-೧೯೭೭ನೇ ತಾರೀಖಿನಂದು ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿ, ೧೫,೦೦೦ಕ್ಕಿಂತ ವಾರ್ಷಿಕ ಆದಾಯ ಕಡಿಮೆ ಇರತಕ್ಕಂಥ ಹಿಂದುಳಿದ ವರ್ಗದ ವಿದ್ಯಾರ್ಥಿಗಳಿಗೆ ಪುಕ್ಕಟೆ ಶಿಕ್ಷಣ ಕೊಡಬೇಕೆಂದು ಆದರಲ್ಲಿ ಹೇಳಿರುವುದು ನಿಜ. ಆದರೆ ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು, ೮-೮-೧೯೭೭ರ ಕೆಳಗೆ ಯಾವ ಚುನಾವಣೆಯೂ ಇರಲಿಲ್ಲ. ಅದಕ್ಕಿಂತ ಮುಂಚೆ ಪಾರ್ಲಿಮೆಂಟ್ ಚುನಾವಣೆ ಮುಗಿದು ಹೋಗಿತ್ತು. ಆ ಮುಂಚಿತವಾಗಿ ಹಿಂದುಳಿದ ವರ್ಗದ ಆಯೋಗದ ಶಿಫಾರಸ್ಸನ್ನು ಅನುಸರಿಸಿ ಸರ್ಕಾರದವರು ಫೆಬ್ರುವರಿಯಲ್ಲಿ ಒಂದು ಆಜ್ಞೆಯನ್ನು ಹೊರಡಿಸಿದರು, ಆದಕ್ಕನುಗುಣವಾಗಿ ೮-೮-೧೯೭೭ರಲ್ಲಿ ಶಿಕ್ಷಣ ಖಾತೆಯವರು ಈ ಒಂದು ಆಜ್ಞೆಯನ್ನು ಹೊರಡಿಸಿದರೇ ವಿನಃ ಚುನಾವಣೆಯ ಕಾಲಕ್ಕೆ ರಾಜಕೀಯ ಉದ್ದೇಶ ಇಟ್ಟುಕೊಂಡು ಆಜ್ಞೆ ಹೊಡಡಿಸಿರಬಹುದು ಎಂದು ಮಾನ್ಯಸದಸ್ಯರು ಸಂಶಯ ವ್ಯಕ್ತಮಾಡಿದ್ದರೆ ಅದಕ್ಕೆ ಯಾವ ಆಧಾರವಿಲ್ಲ ಎಂದು ನಾನು ಹೇಳಬಯಸುತ್ತೇನೆ, ಇದರಲ್ಲಿ ತಪ್ಪು ಏತಕ್ಕೆ ಮಾಡಿದರು ಎಂದರೆ ಹಿಂದುಳಿದ ವರ್ಗದವರ ಆಯೋಗದ ವರದಿಯನ್ನು ಸರ್ಕಾರದವರು ಅಕ್ಸೆಪ್ಟ್ ಮಾಡುವುದಕ್ಕಿಂತ ಮುಂಚೆ ಸರ್ಕಾರದವರು ಒಂದು ಆಜ್ಞೆಯನ್ನು ಹೊರಡಿಸಿದರು. ಅದು ಆ ವರ್ಷದಿಂದ ಇತ್ತು. ಅಲ್ಲಿಂದ ಹರಿಜನ ಗಿರಿಜನ ಮತ್ತು ಹಿಂದುಳಿದ ವರ್ಗದವರಿಗೆ ಶಿಕ್ಷಣ ಶುಲ್ಕವನ್ನು ಮಾಫಿ ಮಾಡಿದ್ದಾರೆ. ಹಿಂದುಳಿದ ವರ್ಗ ಎನ್ನುವ ಪದಕ್ಕೆ ನಮ್ಮ ಸರಕಾರದ ರೀತ್ಯ ಡಿನೋಟಿಫೈಡ್, ನೊಮಾಡಿಕ್, ಸೆಮಿನೊಮಾಡಿಕ್ ಎಂಬ ಅರ್ಥವನ್ನು ಕೊಟ್ಟಿದ್ದಾರೆ. ನೊಮಾಡಿಕ್ ಎಂದರೆ ಅಲೆಮಾರಿ ಜನಾಂಗ, ಸೆಮಿನೊಮಾಡಿಕ್ ಎಂದರೆ ಅರೆ ಅಲೆಮಾರಿ ಜನಾಂಗ, ಈ ಜನರಿಗೆ ಮಾತ್ರ ಆ ಅರ್ಥದ ವ್ಯಾಪ್ತಿ ಅಷ್ಟಕ್ಕೆ ಸೀಮಿತವಾಗಿತ್ತು. ಹಾಗೆ ಯಾರಾದರೂ ಈ ಬಗ್ಗೆ ಗಲಾಟೆ ಇರಲಿಲ್ಲ. ಏಕೆಂದರೆ ಹರಿಜನರಿಗೆ, ಗಿರಿಜನರಿಗೆ ಸಂವಿಧಾನದ ರೀತಿ ನಾವು ಎಲ್ಲಾ ಸೌಲಭ್ಯಗಳನ್ನು ಕೊಡಬೇಕಾಗಿತ್ತು. ನಾವು ಕೊಡುತ್ತಿದ್ದೇವೆ ಈ ಬ್ಯಾಕ್‌ವರ್ಡ್ ಟ್ರೈಬ್ಸ್, ಬ್ಯಾಕ್‌ವರ್ಡ್‌ಕ್ಲಾಸ್ ಮತ್ತು ಅಲೆಮಾರಿ ಜನಾಂಗಕ್ಕೆ ಸೌಲಭ್ಯ ಕೊಡತಕ್ಕಂಥಾದ್ದು ಇತ್ತು. ಅವರ ಜನಸಂಖ್ಯೆ ಶೇಕಡ ೮-೯ ; ಹೆಚ್ಚು ಕಡಿಮೆ ಎಂದರೆ ಶೇಕಡ ೧೦ ಇರಬಹುದು. ಈ ಆಯೋಗದ ವರದಿಯಲ್ಲಿ ಹಿಂದುಳಿದ ವರ್ಗದ ಬಗ್ಗೆ ಒಂದು ವ್ಯಾಖ್ಯಾನವನ್ನು ಕೊಟ್ಟ ನಂತರ ಶೇಕಡ ೫೬ರಷ್ಟು ಜನಸಂಖ್ಯೆ ಇದರಲ್ಲಿ ಸೇರಿದ್ದರಿಂದ ಇವರೆಲ್ಲರೂ ಇದರಿಂದ ಲಾಭ ಪಡೆಯುವುದಕ್ಕೆ ಹತ್ತಿದರು. ಇದರಿಂದ ೧೯೭೭-೭೮ನೇ ಇಸವಿಯಲ್ಲಿ ನಮ್ಮ ಸರಕಾರದ ಬೊಕ್ಕಸದಿಂದ ಅನೇಕ ಕೋಟಿ ರೂಪಾಯಿಗಳಷ್ಟು ಹಣ ಈ ಶಿಕ್ಷಣ ಶುಲ್ಕಕ್ಕಾಗಿ ಹೋಯಿತು. ಅದರ ಪ್ರಕಾರ ಶೇಕಡ ೯೫-೯೭ರಷ್ಟು ವಿದ್ಯಾರ್ಥಿಗಳು ಇದರ ಲಾಭವನ್ನು ಪಡೆದರು. ಇದರಲ್ಲಿ ಸರಕಾರದ ಉದ್ದೇಶ ಬೇರೆ ಇತ್ತು ; ಹಿಂದುಳಿದ ವರ್ಗಗಳಲ್ಲಿ ಯಾವ ಕುಟುಂಬದವರು ಆರ್ಥಿಕವಾಗಿ ಅತಿ ಕೆಳಮಟ್ಟದಲ್ಲಿ ಇದ್ದಾರೆಯೋ ಅಂತಹವರ ಮಕ್ಕಳಿಗೆ ಈ ಒಂದು ಶಿಕ್ಷಣ ಸೌಲಭ್ಯವನ್ನು ಕೊಡಬೇಕು ಎಂಬ ಉದ್ದೇಶ ಸರ್ಕಾರಕ್ಕೆ ಇತ್ತು. ಏನೋ ಒಂದು ತಪ್ಪಿನಿಂದ ಇದರ ಲಾಭವನ್ನು ಎಲ್ಲರೂ ಪಡೆಯುವುದಕ್ಕೆ ಹತ್ತಿದ್ದರಿಂದ, ಹೊದಸಲ ಇದು ನಮ್ಮ ಗಮನಕ್ಕೆ ಬಂದನಂತರ ಒಂದು ವಿಶಾಲವಾದ ತಳಹದಿಯ ಮೇಲೆ ಯಾವುದೇ ಜಾತಿಯಿರಲಿ, ಮೇಲಿನ ವರ್ಗದವರಲ್ಲಿ ಕೆಲವರನ್ನು ಆಯೋಗದ ವರದಿ ಪ್ರಕಾರ 'ಹಿಂದುಳಿದವರು' ಎಂದು ಪರಿಗಣಿಸಲ್ಪಟ್ಟಿರುವುದರಿಂದ, ಈ ಹಿಂದುಳಿದ ವರ್ಗಗಳಲ್ಲಿ ಅತೀ ಕೆಳಮಟ್ಟದ ವರ್ಗದವರಿಗೆ ಇದರ ಲಾಭ ತಟ್ಟಬೇಕು ; ಬಡ ಕುಟುಂಬದವರಿಗೆ ಇದರ ಲಾಭ ತಟ್ಟಬೇಕು ಎಂದು

ಹೇಳಿ ವಾರ್ಷಿಕ ಆದಾಯವನ್ನು ೩೬೦೦ ರೂಪಾಯಿಗಳೆಂದು ನಾವು ತಿಳಿಸಿದ್ದೇವೆ. ಇದರಲ್ಲಿ ಯಾವುದೇ ರಾಜಕೀಯ ಇಲ್ಲ. ಈ ವೀಕರ್‌ಸೆಕ್ಷನ್ಸ್ ಎನ್ನುವುದಕ್ಕೆ ಹೆಚ್ಚು ವ್ಯಾಪ್ತಿ ಬರಲಿ ಮತ್ತು ಈ ಪೆಡ್ಯೂಲ್ ಕ್ಯಾಸ್ಟ್ ಹಾಗೂ ಪೆಡ್ಯೂಲ್ಡ್ ಟ್ರೈಬ್ಸ್‌ನಲ್ಲಿ ಅದರ ಬ್ಯಾಕ್‌ವರ್ಡ್ ಕ್ಯಾಸ್ಟ್ ಬರಲಿ ಎನ್ನುವ ದೃಷ್ಟಿಯಿಂದ ಈ ಉಚಿತ ಶಿಕ್ಷಣ ವ್ಯವಸ್ಥೆಯಲ್ಲಿ ನಾವು ಕೆಲವು ವರ್ಗದವರಿಗೆ ಪುಕ್ಕಟೆ ಶಿಕ್ಷಣ ಕೊಡಬೇಕೆಂದು ವ್ಯವಸ್ಥೆ ಮಾಡಿದ್ದು ಇಡೀ ಭಾರತ ದೇಶದಲ್ಲಿ ನಮ್ಮದು ಪ್ರಥಮ ರಾಜ್ಯ ಎಂದು ಹೇಳುವುದಕ್ಕೆ ನನಗೆ ಹೆಮ್ಮೆ ಎನಿಸುತ್ತಿದೆ.

೨-೩೦ ಪಿ.ಎಂ.

ಈ ಕಾರಣದಿಂದ ಮಾನ್ಯ ಸದಸ್ಯರು ಇದನ್ನು ರಾಜಕೀಯ ಉದ್ದೇಶದಿಂದ ಮಾಡಿದ್ದಾರೆಂದು ಹೇಳುವುದಕ್ಕೆ ಆಧಾರವಿಲ್ಲವೆಂದು ಹೇಳುತ್ತೇನೆ. ಇನ್ನು ಈ ಇಲಾಖೆಗೆ ಲಭ್ಯವಾಗಿರುವ ಅಂಕೆ-ಅಂಶಗಳು ಶಿಕ್ಷಣ ಇಲಾಖೆಯಿಂದ ತಿಳಿದುಕೊಂಡ ಅಂಕಿ-ಅಂಶಗಳೇ ಹೊರತು, ನಮ್ಮದಲ್ಲ. ಎಂಟು ಸಾವಿರದಿಂದ ಹತ್ತು ಸಾವಿರದವರೆಗೆ ವರಮಾನ ಪಡೆಯುವ ಜನರು ಕಡಿಮೆ ಇರುವುದರಿಂದ ಅವರಿಗೆ ಸವಲತ್ತುಗಳನ್ನು ಪುನ: ಕೊಡಬೇಕೆಂದು ಮಾನ್ಯ ಸದಸ್ಯರು ಹೇಳಿದರು. ಹತ್ತು ಸಾವಿರ ರೂಪಾಯಿಗಳ ವರಮಾನದ ಮಿತಿ ಹಾಕಿಕೊಂಡಿದ್ದರಿಂದಲೇ ರಾಜ್ಯದಲ್ಲಿರುವ ಶೇಕಡ ೯೭ ಮಂದಿ ವಿದ್ಯಾರ್ಥಿಗಳು ಇದರ ಲಾಭ ಪಡೆದಿದ್ದಾರೆ. ಅಲ್ಲದೆ ಹತ್ತು ಸಾವಿರ ರೂಪಾಯಿಗಳ ವರಮಾನಕ್ಕೂ ಮೀರಿ ಇದ್ದವರು ಕೇವಲ ಶೇಕಡ ೩ ಇದ್ದುದರಿಂದ ಅವರಿಂದ ಏತಕ್ಕೆ ಶುಲ್ಕ ವಸೂಲ್ಮಾಡಬೇಕೆಂದು ಅವರಿಗೂ ಪೂರ್ಣ ರಿಯಾಯಿತಿ ಕೊಟ್ಟಿದ್ದರೆ, ನೂರಕ್ಕೆ ನೂರು ವಿದ್ಯಾರ್ಥಿಗಳಿಗೂ ಪುಕ್ಕಟೆ ಶಿಕ್ಷಣ ಕೊಟ್ಟೆವೆಂದು ನಾವು ಜಂಬ ಕೊಚ್ಚಿಕೊಳ್ಳಬಹುದಿತ್ತು. ಆದರೆ, ಅದು ಬೇಡ, ರಾಜ್ಯ ಆರ್ಥಿಕ ಪರಿಸ್ಥಿತಿ ಸುಧಾರಿಸಿದರೆ ಅದನ್ನು ನೋಡೋಣವೆಂದು ಸದ್ಯಕ್ಕೆ ೩೬೦೦ ರೂಪಾಯಿಗಳ ವರಮಾನವನ್ನು ನಿಗದಿ ವರಮಾನವನ್ನು ನಿಗದಿ ಮಾಡಲಾಗಿದೆ. ಅಲ್ಲದೆ, ಈ ಮಿತಿಯನ್ನು ನಾಲ್ಕೂವರೆ ಅಥವಾ ಐದು ಸಾವಿರಕ್ಕೆ ಏರಿಸುವ ಸಾಧ್ಯತೆಯನ್ನು ಅವರು ವ್ಯಕ್ತಪಡಿಸಿದರು. ಈಗ ಮಾಡಿರುವಂತೆ ಈ ವರ್ಷ ನೋಡುತ್ತೇವೆ, ಇದು ರಾಜ್ಯದ ಬೊಕ್ಕಸದ ಮೇಲೆ ಎಷ್ಟು ಭಾರವಾಗುತ್ತದೆ ಮತ್ತು ಹೆಚ್ಚಿಗೆ ರಿಯಾಯಿತಿ ಕೊಡಲಿಕ್ಕೆ ಸರಕಾರಕ್ಕೆ ಶಕ್ತಿ ಇದೆಯೇ ಹಾಗೂ ನಿಜವಾದ ವಿದ್ಯಾರ್ಥಿಗಳು ಇದರ ಪ್ರಯೋಜನವನ್ನು ಪಡೆಯುವರೆ ಎನ್ನುವುದನ್ನೆಲ್ಲ ಕೂಲಂಕುಶವಾಗಿ ವಿಚಾರ ಮಾಡಿ, ನಮ್ಮ ರಾಜ್ಯದ ಆರ್ಥಿಕ ಪರಿಸ್ಥಿತಿ ಸುಧಾರಿಸಿದರೆ ಈಗಿರುವ ಮಿತಿಯನ್ನು ಸ್ವಲ್ಪಮಟ್ಟಿಗೆ ಏರಿಸುವ ಆಸೆ ಮಾಡಬಹುದು. ಇನ್ನು, ಶಾಸಕರಿಗೂ ಕೂಡ ಆದಾಯದ ಬಗ್ಗೆ ಸರ್ಟಿಫಿಕೇಟ್ ನೀಡಲು ಅಧಿಕಾರ ಕೊಟ್ಟರೆ, ವಿದ್ಯಾರ್ಥಿಗಳು ಕಛೇರಿಗಳಿಗೆ ಅಲೆಯುವ ಕೆಲಸ ತಪ್ಪುತ್ತದೆಂದು ಹೇಳಿದರು. ಇದರ ಬಗ್ಗೆ ಸರ್ಕಾರ ನಿರ್ಣಯ ತೆಗೆದುಕೊಂಡಿಲ್ಲ. ಇದನ್ನು ವಿಚಾರ ಮಾಡಲಾಗುವುದು. ಶಾಲಾ ಕಾಲೇಜುಗಳು ಪ್ರಾರಂಭವಾಗುವ ಕಾಲಕ್ಕೆ ಈ ಯೋಜನೆಯ ಲಾಭ ಪಡೆಯಬೇಕೆಂದಿರುವ ವಿದ್ಯಾರ್ಥಿಗಳಿಂದ ಲಕ್ಷಾಂತರ ಅರ್ಜಿಗಳು ಕಛೇರಿಗಳಿಗೆ ಬರುತ್ತವೆ. ಇದರಿಂದಾಗಿ, ಅವರ ಉತ್ಪನ್ನವನ್ನು ನಿಗದಿ ಮಾಡಲಿಕ್ಕೆ ಅಥವಾ ಅದನ್ನು ಪರಿಶೀಲಿಸುವುದಕ್ಕೆ ಸಾಕಷ್ಟು ಸಿಬ್ಬಂದಿ ಇಲ್ಲ ಮತ್ತು ವಿದ್ಯಾರ್ಥಿಗಳ ಒತ್ತಡದಿಂದಾಗಿ ಅಲ್ಲಿ ಭ್ರಷ್ಟಾಚಾರಕ್ಕೆ ಅವಕಾಶವಿದೆ ಎಂದು ಕಾಣುತ್ತದೆ, ಆದರೆ, ಈ ವಿಚಾರ ಮಾತ್ರ ಸರ್ಕಾರದ ಜನರಿಗೆ ಬಂದಿಲ್ಲ. ಆದರೂ, ಅಂತಹ ಸಂದರ್ಭಗಳಲ್ಲಿ ಭ್ರಷ್ಟಾಚಾರವಿರುತ್ತದೆಂದು ಎಲ್ಲರಿಗೂ ತಿಳಿದ ವಿಷಯ. ಅದನ್ನು ನಿವಾರಣೆ ಮಾಡಬೇಕು ಮತ್ತು ವಿದ್ಯಾರ್ಥಿಗಳಿಗೂ ತೊಂದರೆಯಾಗಕೂಡದು. ಆದುದರಿಂದ, ಸರ್ಟಿಫಿಕೇಟ್ ಕೊಡಲಿಕ್ಕೆ ಯಾರು ಯಾರಿಗೆ ಅಧಿಕಾರ ಕೊಡಬೇಕೆನ್ನುವುದರ ಬಗ್ಗೆ ಪೂರ್ತ ವಿಚಾರ ಮಾಡಿ, ಸಾಧ್ಯವಾದರೆ ಲೋಕಸಭಾ ಸದಸ್ಯರಿಗೂ, ವಿಧಾನ ಸಭೆ ಮತ್ತು ಪರಿಷತ್ತಿನ ಸದಸ್ಯರಿಗೂ ಮತ್ತು ಮುನಿಸಿಪಲ್ ಕಾರ್ಪೊರೇಟರ್‌ಗಳಿಗೂ ಅಧಿಕಾರ ಕೊಡುವುದು ಯೋಗ್ಯವೆಂದು ಸರ್ಕಾರಕ್ಕೆ ಕಂಡುಬಂದರೆ, ಆ ಅಧಿಕಾರವನ್ನೂ ಕೊಡಬಹುದು. ಆದರೆ, ಮಾನ್ಯ ಸದಸ್ಯರು ಇದನ್ನು ನಾನು ನೀಡುತ್ತಿರುವ ಆಶ್ವಾಸನೆಯೆಂದು ತಿಳಿದುಕೊಳ್ಳಬಾರದು.

ಶ್ರೀ ಎಸ್.ಆರ್. ಬೊಮ್ಮಾಯಿ—ಹಿಂದೆ ಹೊರಡಿಸಿದ್ದ ದಿನಾಂಕ ೮-೮-೭೭ರ ಆಜ್ಞೆ ಪ್ರಕಾರ ಖಾಸ್ಗೀ ಕಾಲೇಜುಗಳವರೆಗೆ ಇನ್ನೂ ಹಣ ಮರುಪಾವತಿಯಾಗಿಲ್ಲ. ದಾವಣಗೆರೆ ಕಾನೂನು ಕಾಲೇಜಿನ ಪ್ರಿನ್ಸಿಪಾಲರು ಮತ್ತಿತರರು ನನ್ನ ಬಳಿಗೆ ಬಂದಿದ್ದರು. ಮಾನ್ಯ ಸಚಿವರು ಹಿಂದೆ ಹೇಳಿಕೆ ಕೊಡುತ್ತಾ, ಈ ಹಣವನ್ನು ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ ಎಂದು ಹೇಳಿದ್ದರು. ಆದರೆ, ಅದಿನ್ನೂ ಎಷ್ಟೋ

ಕಾಲೇಜುಗಳಿಗೆ ಮುಟ್ಟಿಲ್ಲ. ಮಾನ್ಯ ಸಚಿವರು ಕಾಲೇಜಿನವರಿಗೆ ಕೊಡಬೇಕೆಂದು ಆಜ್ಞೆ ಹೊರಡಿಸಿದ್ದಾರೆ. ಆದಕ್ಕೆ ಸಂಬಂಧಿಸಿದ ಹಣವನ್ನು ಆಯವ್ಯಯದಲ್ಲೂ ಸೇರಿಸಲಾಗಿದೆ. ಆದರೂ, ಅದು ಸಂಬಂಧ ಪಟ್ಟವರಿಗೆ ಮುಟ್ಟಿಲ್ಲ. ಇದರಿಂದಾಗಿ, ಇಂದು ಎಷ್ಟೋ ಕಾಲೇಜುಗಳು ಮುಚ್ಚುವ ಸ್ಥಿತಿಯಲ್ಲಿವೆ. ಅವುಗಳು ಉಪಾಧ್ಯಾಯರುಗಳಿಗೆ ಸಂಬಳ ಕೊಡುವ ಸ್ಥಿತಿಯಲ್ಲಿಲ್ಲ. ಇದರ ಬಗ್ಗೆ ಮಾನ್ಯ ಸಚಿವರು ವಿವರಣೆ ನೀಡಬೇಕು.

ಶ್ರೀ ಭೀಮಣ್ಣ ಖಂಡ್ರೆ— ಮಾನ್ಯ ಅಧ್ಯಕ್ಷರೇ, ಮಾನ್ಯ ಹಾವನೂರ್ ಅವರಿಗೆ ಈಗ ಸ್ವಲ್ಪ ಬುದ್ಧಿ ಬಂದಿದ್ದು, ಅವರು ಬುದ್ಧಿವಂತರಾಗಿದ್ದಾರೆ. ಎಲ್ಲ ಜಾತಿಗಳನ್ನೂ ಬಿಟ್ಟು ಪರಮಾನ ಮಿತಿಯನ್ನು ಅವರು ನಿಗದಿಪಡಿಸಿದ್ದಾರೆ. ಅದೇ ಪ್ರಕಾರ ಎಲ್ಲ ಜಾತಿಗಳನ್ನು ಬಿಟ್ಟು ರಿಜರ್ವೇಷನ್ ಇಡುವುದು ಒಳ್ಳೆಯದು. ಅಲ್ಲದೆ, ಹಾವನೂರು ವರದಿ ಈ ಸದನದಲ್ಲಿ ಚರ್ಚೆಗೆ ಬಂದಿಲ್ಲ. ಅದರ ಚರ್ಚೆಗೆ ಅವಕಾಶ ಮಾಡಿಕೊಡಬೇಕು.

ಶ್ರೀ ಎಲ್.ಜಿ. ಹಾವನೂರ್—ಮಾನ್ಯ ಬೊಮ್ಮಾಯಿಯವರು ಎತ್ತಿರುವ ಪ್ರಶ್ನೆಗೆ ಮೊದಲು ಉತ್ತರ ಕೊಟ್ಟು, ನಂತರ ಮಾನ್ಯ ಖಂಡ್ರೆಯವರ ಪ್ರಶ್ನೆಗೆ ಉತ್ತರ ಕೊಡುತ್ತೇನೆ, ಮಾನ್ಯ ಬೊಮ್ಮಾಯಿಯವರು ಮಾತನಾಡುತ್ತಾ, ಕೆಲವು ಶಿಕ್ಷಣ ಸಂಸ್ಥೆಗಳಿಗೆ ಇನ್ನೂ ಹಣ ಸಿಕ್ಕಿಲ್ಲವೆಂದು ಹೇಳಿದರು. ಇದಕ್ಕೆ ಕಾರಣ ನಾವು ಹಾಕಿರುವ ಕ್ರಮ ಸ್ವಲ್ಪ ಕಠೋರವಾಗಿದೆ ಎಂದು ಅವರು ಭಾವಿಸಿರಬಹುದೆಂದು ನನಗನ್ನಿಸುತ್ತದೆ. ಕೆಲವು ಶಿಕ್ಷಣ ಸಂಸ್ಥೆಗಳು ವಿದ್ಯಾರ್ಥಿಗಳಿಂದ ಈ ಶುಲ್ಕ ವಸೂಲ್ಮಾಡದೆ ವಸೂಲ್ಮಾಡಿದ್ದೇವೆಂದು ಹೇಳಿ ಸರ್ಕಾರದಿಂದ ಹಣ ಹೊಡೆಯಲಿಕ್ಕೆ ಪ್ರಯತ್ನ ಮಾಡಿದ್ದು ಕಂಡುಬಂದಿತು ಒಂದು ವೇಳೆ ವಿದ್ಯಾರ್ಥಿಗಳು ಶುಲ್ಕವನ್ನು ಕಟ್ಟಿದ್ದರೆ, ಅದರ ಮರುಪಾವತಿಯನ್ನು ನೇರವಾಗಿ ವಿದ್ಯಾರ್ಥಿಗಳಿಗೆ ಮಾಡಬೇಕು ಮತ್ತು ಅವರು ಕಟ್ಟಿದಿದ್ದರೆ ಮರುಪಾವತಿಯನ್ನು ಶಿಕ್ಷಣ ಸಂಸ್ಥೆಗೆ ಮಾಡಬೇಕೆಂದು ಕಠೋರ ನಿಯಮವಿತ್ತು. ಆದುದರಿಂದ, ಕಾಲೇಜಿನವರು ನ್ಯಾಯವಾಗಿ ವಿದ್ಯಾರ್ಥಿಗಳಿಂದ ಶುಲ್ಕವನ್ನು ವಸೂಲ್ಮಾಡಿದ್ದರೆ, ಅಂತಹ ವಿದ್ಯಾರ್ಥಿಗಳು ಯಾರು ಮತ್ತು ಶುಲ್ಕ ಕಟ್ಟಿದ್ದಕ್ಕೆ ಸಂಬಂಧಿಸಿದ ಸರ್ಟಿಫಿಕೇಟನ್ನು ಕಳುಹಿಸಿಕೊಟ್ಟರೆ ಹಣ ಕೊಡಲಿಕ್ಕೆ ನಾವು ಸಿದ್ಧರಾಗಿದ್ದೇವೆ, ಆದರೆ, ಪೂರ್ತ ಹಣ ಕೊಡಲಿಕ್ಕೆ ಸ್ವಲ್ಪ ಕಷ್ಟವಾಗಬಹುದೆಂದು ಹೇಳಲಾಗಿದೆ. ಈ ವರ್ಷಕ್ಕೆ ನಾಲ್ಕು ಕೋಟಿ ರೂಪಾಯಿಗಳನ್ನು ಮೀಸಲಿಡಲಾಗಿದೆ. ಈ ಹಣವನ್ನು ಎಲ್ಲ ಜಿಲ್ಲಾಧಿಕಾರಿಗಳವರಿಗೂ ಕಳುಹಿಸಿಕೊಡಲಾಗಿದೆ; ಅವರು ಸಂಬಂಧ ಪಟ್ಟ ಶಿಕ್ಷಣ ಸಂಸ್ಥೆಗಳಿಗೆ ಕೊಡುತ್ತಾರೆ. ಅಲ್ಲದೆ, ವಿದ್ಯಾರ್ಥಿಗಳು ಮೊದಲೇ ಶುಲ್ಕ ಕಟ್ಟಿದ್ದು ಮತ್ತು ಅದರ ಬಗ್ಗೆ ರಸೀದಿ ತೋರಿಸಿದರೆ, ಅವರಿಗೆ ಹಣ ಕೊಡಬೇಕೆಂದು ನಿರ್ದೇಶನ ಕೊಡಲಾಗಿದೆ. ಹಣ ಸಂದಾಯವಾಗುವುದರಲ್ಲಿ ಸ್ವಲ್ಪ ವಿಳಂಬವಾಗಬಹುದು. ಆದರೆ, ವಿದ್ಯಾರ್ಥಿಗಳಿಗಾಗಲೀ ಅಥವಾ ಶಿಕ್ಷಣ ಸಂಸ್ಥೆಗಳಿಗಾಗಲೀ ನ್ಯಾಯವಾಗಿ ಸಲ್ಲಬೇಕಾದ ಒಂದು ಕಾಸನ್ನೂ ಸಹ ನಿಲ್ಲಿಸದೆ ಸಂಪೂರ್ಣವಾಗಿ ಕೊಡಲಾಗುವುದೆಂದು ನಾನು ಸರ್ಕಾರದ ಪರವಿಂದ ಆಶ್ವಾಸನೆ ಕೊಡಬಯಸುತ್ತೇನೆ.

ಮಾನ್ಯ ಖಂಡ್ರೆಯವರು ಮಾತನಾಡುತ್ತಾ, ಶಿಕ್ಷಣ ಶುಲ್ಕ ವಿನಾಯ್ತಿಗೆ ೩,೬೦೦ ರೂಪಾಯಿಗಳ ಪರಮಾನ ಮಿತಿಯನ್ನು ಜಾತಿ ಬಿಟ್ಟು ಮಾಡಿದ್ದೀರಿ, ಅದರಂತೆ ಎಲ್ಲದರಲ್ಲೂ ಮಾಡಿ ಎಂದು ಹೇಳಿದರು. ಯಾರೇ ಆಗಲಿ—ನಾವು ಬಡವರು, ಹಿಂದುಳಿದವರೆಂದು ಅನ್ನಿಸಿಕೊಳ್ಳುವುದಕ್ಕೆ ಹೆಮ್ಮೆಪಡುವುದಿಲ್ಲವೆಂಬುದನ್ನು ಮಾನ್ಯ ಸದಸ್ಯರು ತಿಳಿದುಕೊಳ್ಳಬೇಕು. ೧೯೪೮ರ ಪಿಲ್ಲರ್ ವರದಿ ಕೆಳಗೆ ಬ್ರಾಹ್ಮಣರ ಜಾತಿ ಬಿಟ್ಟು ಲಿಂಗಾಯತರು ಮತ್ತು ಒಕ್ಕಲಿಗರು ಹಿರಿದುಳಿದ ಜಾತಿಗಳಾಗಿ ಸಿಕ್ಕಿದವು. ಈ ಪಾದ ನಿನ್ನೆ—ಮೊನ್ನೆಯದಲ್ಲ. ನೂರಾರು ವರ್ಷಗಳಿಂದ ಇದು ಬಂದಿದೆ. ೧೯೭೪ರಲ್ಲಿ ಪ್ರಪ್ರಥಮವಾಗಿ ರಿಜರ್ವೇಷನ್ ವಿಚಾರ ಹಳೆ ಮೈಸೂರಿನಲ್ಲಿ ಬಂದಿತ್ತು. ಇದಕ್ಕೆ ನಾವು ಕಾರಣೀಭೂತರಲ್ಲ. ಜಾತಿ ಬೇಡ ಎನ್ನುವುದನ್ನು ನಾನು ಒಪ್ಪುತ್ತೇನೆ. ಕೆಳಜಾತಿಯವನೆಂದು ಅನ್ನಿಸಿಕೊಳ್ಳುವುದಕ್ಕೆ ಅಭಿಮಾನ ಅಥವಾ ಸಂತೋಷ ವಿರುವುದಿಲ್ಲ. ಜಾತಿಯತೆಯ ಸಮಸ್ಯೆಯನ್ನು ನಿರ್ಮೂಲನೆ ಮಾಡಲಿಕ್ಕೆ, ಗುಂಪುರಹಿತ ಸಮಾಜವನ್ನು ನಿರ್ಮಾಣ ಮಾಡುವುದಕ್ಕೆ ನಾನು ಪೊಟ್ಟಮೊದಲನೆಯವನಾಗಿ ನಿಮ್ಮೊಡನೆ ಬರುತ್ತೇನೆ. ಆದರೆ, ನಾಲ್ಕು ಜನರಿಗೆ ನೌಕರಿ ಸಿಗುತ್ತದೆಂದರೆ, ನಾಲ್ಕು ವಿದ್ಯಾರ್ಥಿಗಳಿಗೆ ಶಿಕ್ಷಣ ಶುಲ್ಕ ರಿಯಾಯ್ತಿಗೊಳಿಸುತ್ತದೆಂದಾಗ ಈ ಮಾತು ಬರಬೇಕೆ ? ಜೀವನದ ಸಾವಿರಾರು ರಂಗಗಳಲ್ಲಿ ಜಾತೀಯತೆ ತಾಂಡವವಾಡುತ್ತಿರುವಾಗ ಹಿಂದುಳಿದವರಿಗೆ ನಾಲ್ಕು ಸೀಟನ್ನು ಇಂಜಿನಿಯರಿಂಗ್ ಕಾಲೇಜುಗಳಲ್ಲಿ ರಿಜರ್ವೇಷನ್ ಇಟ್ಟರೆ, ಸರ್ಕಾರಿ ನೌಕರಿಗೆ ರಿಜರ್ವೇಷನ್ ಇಟ್ಟರೆ ಈ ಮಾತು ಬರಬೇಕೆ ? ಎಲ್ಲೋ ಒಂದು ರಂಗದಲ್ಲಿ ಮಾತ್ರ

ಜಾತಿ ಬೇಡ ಎಂದು ಹೇಳಿದರೆ ಹೇಗೆ ? ನಾನು ಈ ರೀತಿ ಹೇಳುತ್ತಿರುವುದರಿಂದ, ನಾನು ಜಾತೀಯತೆ ಯನ್ನು ಗೌರವಿಸುತ್ತಿದ್ದೇನೆಂದು ತಿಳಿವು ಭಾವಿಸಬಾರದು.

Matter under rule 312 :

Re : probable damage to the Sericulture Industry due to new export policy of the Govt. of India.

†Sri A. K. Abdul Samad (Ramanagaram).—Sir, I raise the matter under Rule 312 regarding servere damage likely to be caused to the Sericulture Industry in the State due to the announcement of the new export policy of the Government of India. Sir, this policy has adversely affected the Sericulture Industry in Karnataka and our neighbouring States of Tamil Nadu and Andhra Pradesh. People from Japan and other countries would like to import cocoons to their country. Our Hon. Chief Minister took the initiative in respect of bivoltine cocoon as import substitution. Under the new orders, imports of raw silk is permitted. Earlier to that only 10 per cent was allowed. Now, any exporter, whether he is an engineering goods exporter or any other exporter has the right to import 10 per cent of the replenishment. That means if you are exporting one crore worth of it, 10 crores of raw silk can be imported, from China and some other countries. The price is 180-200 here. It is nothing but dumping of goods. This has been discussed and Government of India is not conceding. The Hon Union Minister for Industries Mr. George Fernandes has said that this is labour-oriented and it is an export-intensive scheme. The point is this. We have to recommend to the Government of India that the people of Karnataka, especialy the persons involved in Sericulture Industry are very much affected by this order and if necessary, the Hon. Minister Sri K. B. Shivaiah and the Chief Minister should go on a delegation on behalf of the Legislature and persuade the Government of India. Mere writing is not sufficient. This is going to ruin the industry We should go on a delegation and see that this import policy is amended. Government of India should be persuaded not to allow more than a small quantity to be imported into the country.

†Sri M. C Basappa (Chamarajanagar).—Mr. Speaker. Sir, this import of raw silk under the replenishment scheme is not a new scheme. It was existing formerly also. But this year, the Government of India has changed their policy. Formerly they were allowing 10 per cent of the entitlement import over the silk exported from this country. This 10 per cent was allowed because bivoltine silk was not produced in Karnataka and India. But this year, the